


# ಮಕ್ಕಳಿಗಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳು 2030


KCRO
KARNATAKA CHILD RIGHTS OBSERVATORY


## ಸುಸ್ಥಿರ ಅಭಿವೃದ್ಧಿ ಗುರಿಗಳು, ಲಕ್ಷ್ಯಗಳು ಮತ್ತು ಸೂಚಕಗಳು




# ಸುಸ್ಥಿರ ಅಭಿವೃದ್ಧಿ ಗುರಿಗಳು

ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್.ಡಿ.ಜಿ) ಬಡತನವನ್ನು ಅದರ ಎಲ್ಲಾ ಆಯಾಮಗಳಲ್ಲಿ ಕೊನೆಗೊಳಿಸಿ, 2030ರೊಳಗೆ ಜನ, ಈ ಭೂಮಿ ಮತ್ತು ಸಮೃದ್ಧಿಗಾಗಿ ಸಮಾನವಾದ, ನ್ಯಾಯಯುತವಾದ ಮತ್ತು ಸುರಕ್ಷಿತವಾದ ಜಗತ್ತನ್ನು ನಿರ್ಮಿಸುವ ಸಲುವಾಗಿ ಹಮ್ಮಿಕೊಂಡಿರುವ ದಿಟ್ಟ ಹಾಗೂ ಸಾರ್ವತ್ರಿಕ ಒಪ್ಪಂದವಾಗಿದೆ.

17 ಎಸ್.ಡಿ.ಜಿಗಳು ಮತ್ತು 169 ಲಕ್ಷ್ಯಗಳು ನಮ್ಮ ವಿಶ್ವವನ್ನು ಪರಿವರ್ತಿಸುವುದು: ಸುಸ್ಥಿರ ಅಭಿವೃದ್ಧಿಗಾಗಿ 2030ರ ಕಾರ್ಯಸೂಚಿಯ ಭಾಗವಾಗಿದೆ. ಇದನ್ನು 2015ರ ಸೆಪ್ಟಂಬರ್‌ನಲ್ಲಿ ನಡೆದ 193 ಸದಸ್ಯ ರಾಷ್ಟ್ರಗಳ ವಿಶ್ವಸಂಸ್ಥೆಯ ಸಾಮಾನ್ಯ ಸರ್ವ ಸದಸ್ಯರ ಐತಿಹಾಸಿಕ ಶೃಂಗ ಸಮ್ಮೇಳನದಲ್ಲಿ ಅಳವಡಿಸಿಕೊಳ್ಳಲಾಯಿತು. ಎಸ್.ಡಿ.ಜಿ. 1 ಜನವರಿ 2016ರಿಂದ ಜಾರಿಗೆ ಬಂದಿದೆ. ಭಾರತವೂ ಎಸ್.ಡಿ.ಜಿ.ಗಳ ಜಾರಿಗೆ ಒಪ್ಪಿಕೊಂಡಿದೆ.

ಜಗತ್ತಿನ್ನೆಲ್ಲೆಡೆಯ ರಾಷ್ಟ್ರೀಯ ಸರ್ಕಾರಗಳು ಮತ್ತು ಅಲ್ಲಿನ ಕೋಟ್ಯಂತರ ನಾಗರೀಕರನ್ನು ಒಳಗೊಂಡ ಅಭೂತಪೂರ್ವ ಸಲಹೆ, ಪರ್ಯಾಲೋಚನೆ ಮತ್ತು ಸಮಾಲೋಚನಾ ಪ್ರಕ್ರಿಯೆಗಳಿಂದ ಈ ಮಹತ್ವಾಕಾಂಕ್ಷಿ ಕಾರ್ಯಸೂಚಿಯಾದ ಎಸ್.ಡಿ.ಜಿ.ಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಮಕ್ಕಳ ಹಕ್ಕುಗಳ ನಿಗಾ ಕೇಂದ್ರ** : ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಮುಖ್ಯ ಉದ್ದೇಶ ಎಲ್ಲಾ ಭಾಗೀದಾರರನ್ನು ಒಳಗೂಡಿಸಿಕೊಂಡು ಪ್ರಕರಣ ಅಧ್ಯಯನ, ಸ್ಥಳ ಸಮೀಕ್ಷೆ ಹಾಗೂ ಅಂಕಿ ಅಂಶಗಳನ್ನು ಒಳಗೊಂಡ ಸಂಶೋಧನೆಗಳು, ವಿಶ್ಲೇಷಣೆ, ತರಬೇತಿ, ಪ್ರಕಟಣೆ, ಪ್ರಚಾರ ಮತ್ತು ಒತ್ತಡ (ಅವಶ್ಯವಿದ್ದಂತೆ) ಮೊದಲಾದವುಗಳನ್ನು ಒದಗಿಸುವುದರ ಮೂಲಕ ಸರ್ಕಾರ ಮತ್ತು ಸಮುದಾಯಗಳು ಮಕ್ಕಳ ಹಿತದೃಷ್ಟಿಯಿಂದ ವರ್ತಿಸುವಂತೆ ಮಾಡುವುದು. ನಿಗಾ ಕೇಂದ್ರವು ಯುನಿಸೆಫ್ ಜೊತೆಗೂಡಿ ಕರ್ನಾಟಕದಲ್ಲಿನ ಶಾಸಕರು, ಮಾದ್ಯಮ, ವಿಶ್ವವಿದ್ಯಾಲಯಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳೊಡನೆ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವ ಕೆಲಸಗಳಲ್ಲಿ ತೊಡಗಿಸಿಕೊಂಡಿದೆ.

KCRO
KARNATAKA
CHILD RIGHTS
OBSERVATORY

cover and page layout design : Wishvaa Winyaas 9845620872

# ಮಕ್ಕಳಿಗಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳು 2030



## ಮಕ್ಕಳಿಗಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳು 2030

**SDG-Sustainable Development Goals 2030 for Children**


**ಕಲ್ಪನೆ, ಸಂಪಾದನೆ ಮತ್ತು ರಚನೆ:**
ವಾಸುದೇವ ಶರ್ಮಾ ಎನ್.ವಿ.; ಸತೀಶ್ ಜಿ.ಸಿ; ನಾಗಸಿಂಹ ಜಿ.ರಾವ್; ಸಿ.ಎನ್. ಕಳಕಪ್ಪ;
ರಶ್ಮಿ ಜಿ.ಎಂ.; ಶಿವರಾಜ್ ಮತ್ತು ನಾಗಮಣಿ ಸಿ.ಎನ್.

**ಸಲಹೆ ಮತ್ತು ನಿರ್ದೇಶನ:**
ಡಾ.ಪದ್ಮಿನಿ ಮತ್ತು ಪ್ರಸೂನ್ ಸೇನ್

**ಪ್ರಕಟನೆಗೆ ಸಹಾಯ:** ಯುನಿಸೆಫ್

**ಮುಖಪುಟ, ಚಿತ್ರಗಳು ಮತ್ತು ಪುಟ ವಿನ್ಯಾಸ:**
**ವಿಶ್ವವಿನ್ಯಾಸ್,** 9845620872, wishvaawinyaas@gmail.com

**ಮೊದಲ ಆವೃತ್ತಿ:** ನವೆಂಬರ್ 2017

**ಪ್ರತಿಗಳು** : 1000


**ಪ್ರಕಾಶಕರು:** ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ www.kcro.in

**ಸಂಚಾಲನಾ ಕಛೇರಿ:** ಚೈಲ್ಡ್ ರೈಟ್ಸ್ ಟ್ರಸ್ಟ್, 4606, 6ನೇ ಮಹಡಿ, ಹೈಪಾಯಿಂಟ್ 4,
ಅರಮನೆ ರಸ್ತೆ, ಬೆಂಗಳೂರು 560001

**ದೂರವಾಣಿ** : 080 22201098

**ಇ-ಮೈಲ್:** kcronodalcrt@gmail.com, crtindia@yahoo.co.in

**ಮುದ್ರಕರು:** ಶ್ರೀ ಸುಬ್ರಮಣ್ಯೇಶ್ವರ ಬುಕ್ ಡಿಪೋ, #50, 3ನೇ ಮುಖ್ಯರಸ್ತೆ,
ಹೊಸ ತರಗುಪೇಟೆ, ಬೆಂಗಳೂರು 560002. **ದೂ.** 080 26706558; 41221110

- ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕುರಿತು ಮಕ್ಕಳ ಮಧ್ಯೆ ಚರ್ಚಿಸಲು ನೆರವಾಗಲು ಈ ಪುಸ್ತಕವನ್ನು ರಚಿಸಲಾಗಿದೆ. ಮಕ್ಕಳು ಸುಸ್ಥಿರತೆ ಮತ್ತು ಅಭಿವೃದ್ಧಿ ವಿಚಾರಗಳನ್ನು ತಮ್ಮ ಪಠ್ಯ ಮತ್ತು ಪಠ್ಯೇತರ ವಿಷಯಗಳಲ್ಲಿ ಗುರುತಿಸಲು ಮತ್ತು ಪರಸ್ಪರ ಚಿಂತನೆ, ವಿಚಾರಣೆ, ಹೊಸ ವಿಚಾರಗಳನ್ನು ಕಂಡುಕೊಳ್ಳುವ ಪ್ರಯತ್ನಗಳಿಗೆ ಈ ಮಾಹಿತಿ ನೆರವಾಗಬಹುದು ಎಂದು ನಂಬಲಾಗಿದೆ.

- ಶಿಕ್ಷಕರು ಮತ್ತು ಪೋಷಕರು ಕೂಡಾ ಈ ಪುಸ್ತಕವನ್ನು ಓದಿ, ಮಕ್ಕಳಿಗೆ ವಿವಿಧ ವಿಚಾರಗಳನ್ನು ಕುರಿತು ಮಾತನಾಡಲು, ಅರಿತುಕೊಳ್ಳಲು ಪ್ರೇರಣೆ ನೀಡಲು ಕೋರುತ್ತೇವೆ.



# ಸುಸ್ಥಿರ ಅಭಿವೃದ್ಧಿ ಮತ್ತು ಮಕ್ಕಳು

ಪ್ರಿಯ ಮಕ್ಕಳೇ

ವಿಶ್ವಸಂಸ್ಥೆಯು ಮಂಡಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಭಾರತವೂ ಸೇರಿದಂತೆ ವಿಶ್ವದ ಬಹುತೇಕ ರಾಷ್ಟ್ರಗಳು ಒಪ್ಪಿಕೊಂಡಿವೆ. ಇದರಲ್ಲಿ 17 ಗುರಿಗಳು, 169 ಲಕ್ಷ್ಯಗಳು ಹಾಗು 230 ಸೂಚಕಗಳಿವೆ. ಒಂದು ಅಂದಾಜಿನ ಪ್ರಕಾರ ಸುಮಾರು ಏಳು ಗುರಿಗಳು ಮತ್ತು ಸುಮಾರು 50 ಲಕ್ಷ್ಯಗಳು ನೇರವಾಗಿ ಮಕ್ಕಳಿಗೆ ಸಂಬಂಧಿಸಿದ್ದೇ ಆಗಿವೆ. ಈ ಗುರಿಗಳನ್ನು ನಾವೆಲ್ಲರೂ ಒಟ್ಟಾಗಿ 2030ರೊಳಗೆ ಸಾಧಿಸಿದರೆ ನಮ್ಮ ಎಲ್ಲ ರಾಜ್ಯಗಳ, ದೇಶದ ಮತ್ತು ವಿಶ್ವದ ಬಹುತೇಕ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವುದು ಖಂಡಿತಾ.

ಈ ಗುರಿಗಳನ್ನು ಸಾಧಿಸಲು ಕೇವಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನ ಸಾಲದು. ಇದರ ಜೊತೆಗೆ ಎಲ್ಲ ಸ್ಥಳೀಯ ಸರ್ಕಾರಗಳು, ಸ್ವಯಂಸೇವಾ ಸಂಸ್ಥೆಗಳು, ಕೈಗಾರಿಕೆಗಳು, ವ್ಯಾಪಾರೋದ್ಯಮಗಳು, ಸೇವಾ ವಲಯಗಳು, ಸಮುದಾಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಕ್ಕಳಾದ ನೀವು ಈ ಗುರಿಗಳನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ. ಏಕೆಂದರೆ ಈ ಗುರಿಗಳನ್ನು 2030ರೊಳಗೆ ಸಾಧಿಸಬೇಕಿರುವುದರಿಂದ ಆ ಸಮಯಕ್ಕೆ ಈಗ ಮಕ್ಕಳಾಗಿರುವ ನೀವು ಜವಾಬ್ದಾರಿಯುತ ಯುವಜನಾಂಗವಾಗಿರುತ್ತೀರಿ. ಈ ಗುರಿಗಳನ್ನು ಸಾಧಿಸಲು ನಿಮ್ಮ ಕೊಡುಗೆಯೂ ಸಹ ಮಹತ್ವಪೂರ್ವದ್ದಾಗಿದೆ.

ಈ ಕೈಪಿಡಿಯಲ್ಲಿ ಸರಳ ಭಾಷೆಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಪರಿಚಯ, ಪ್ರತಿಯೊಂದು ಗುರಿಗಳಿಗೂ ಸಂಬಂಧಪಟ್ಟಂತೆ ಲಭ್ಯವಿರುವ ಮಕ್ಕಳ ಸ್ಥಿತಿಗಳನ್ನೂ ಸಹ ನೀಡಲು ಯತ್ನಿಸಲಾಗಿದೆ. ಇದರ ಜೊತೆಗೆ ಈ ಗುರಿಗಳನ್ನು ಸಾಧಿಸಲು ನೀವು ಏನು ಮಾಡಬಹುದು ಎಂಬುದನ್ನೂ ನೀಡಲಾಗಿದೆ. ಮುಂದಿನ 13 ವರ್ಷಗಳಲ್ಲಿ ಈ ಗುರಿಗಳನ್ನು ಸಾಧಿಸಲು ನೀವು ನಿಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸುತ್ತೀರೆಂದು ನಂಬಿದ್ದೇವೆ ಮತ್ತು ಆ ನಿಟ್ಟಿನಲ್ಲಿ ಈ ಕೈಪಿಡಿಯು ನಿಮಗೆ ನೆರವಾಗುವುದೆಂದು ನಂಬಿದ್ದೇವೆ.

ವಂದನೆಗಳೊಂದಿಗೆ

**ವಾಸುದೇವ ಶರ್ಮಾ ಎನ್.ವಿ.**

ರಾಜ್ಯ ಸಂಚಾಲಕರು, ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ

# ಪರಿವಿಡಿ





**ಗುರಿ 1:**

ಬಡತನದಿಂದ ಮುಕ್ತಿ ....1

**ಗುರಿ 2.**

ಹಸಿವು ಮುಕ್ತ ....3

**ಗುರಿ 3.**

ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ ....5

**ಗುರಿ 4:**

ಗುಣಮಟ್ಟದ ಶಿಕ್ಷಣ ....7

**ಗುರಿ 5:**

ಲಿಂಗ ಸಮಾನತೆ....9

**ಗುರಿ 6:**

ಸ್ವಚ್ಛ ನೀರು ಮತ್ತು ನೈರ್ಮಲ್ಯ ....11

**ಗುರಿ 7:**

ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ ....13

**ಗುರಿ 8:**

ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ ....15

**ಗುರಿ 9:**

ಉದ್ಯಮ ಆವಿಷ್ಕಾರ ಮತ್ತು ಮೂಲಸೌಕರ್ಯ ....17

**ಗುರಿ 10:**

ಅಸಮಾನತೆಗಳ ಇಳಿಕೆ ....19

**ಗುರಿ 11:**

ಸುಸ್ಥಿರ ನಗರಗಳು ಮತ್ತು ಸಮುದಾಯಗಳು ....21

**ಗುರಿ 12:**

ಸುಸ್ಥಿರ ಬಳಕೆ ಮತ್ತು ಉತ್ಪಾದನೆ ....23

**ಗುರಿ 13:**

ಹವಾಮಾನ ಕ್ರಮ ....25

**ಗುರಿ 14:**

ಜಲದಡಿಯ ಜೀವರಾಶಿ ....27

**ಗುರಿ 15:**

ಭೂಮಿ ಮೇಲಿನ ಜೀವಜಾಲ ....29

**ಗುರಿ 16:**

ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು ....31

**ಗುರಿ 17:**

ಗುರಿಗಳಿಗಾಗಿ ಸಹಭಾಗಿತ್ವ ....33


ನಾಟಕ....35

# ಸುಸ್ಥಿರ ಅಭಿವೃದ್ಧಿಯೆಂದರೆ..




ಯಾವುದೇ ಅಭಿವೃದ್ಧಿಯಿಂದ ಸಿಗುವ ಫಲಿತಾಂಶ, ಪ್ರಯೋಜನವನ್ನು ಒಬ್ಬರೇ ಬಳಸಿ, ಎಲ್ಲವನ್ನೂ ಮುಗಿಸಿಬಿಡುವುದು, ಖಾಲಿ ಮಾಡುವುದು ಒಳ್ಳೆಯದಲ್ಲ. ಅದು ಸುಸ್ಥಿರವಲ್ಲ. ಸುಸ್ಥಿರ ಅಭಿವೃದ್ಧಿಯೆಂದರೆ, ಸ್ವಾಭಾವಿಕವಾಗಿ ಇರುವ, ಸಿಗುವ ಮತ್ತು ಮನುಷ್ಯರು ಸೃಷ್ಟಿಸಿರುವ ಅಥವಾ ತಯಾರಿಸಿರುವ ಸಂಪನ್ಮೂಲಗಳನ್ನು ನಮಗೆ ಎಷ್ಟು ಆವಶ್ಯಕತೆ ಇದೆಯೋ ಅಷ್ಟನ್ನು ಮಾತ್ರ ಬಳಸಿಕೊಂಡು ಉಳಿದವರಿಗಾಗಿ ಅದೇ ಸಂಪನ್ಮೂಲಗಳನ್ನು, ಉದಾಹರಣೆಗೆ, ನದಿ, ಹಳ್ಳ, ಬಾವಿ, ತೊರೆ, ಕೆರೆಕಟ್ಟೆಗಳು, ಗಿಡ, ಮರ, ಬಳ್ಳಿ, ಗುಡ್ಡ, ಬೆಟ್ಟ, ತೈಲ, ಗಾಳಿ, ಪ್ರಾಣಿ ಮತ್ತು ಪಕ್ಷಿ ಸಂಕುಲ ಇವೇ ಮೊದಲಾದ ನೈಸರ್ಗಿಕ ಸಂಪನ್ಮೂಲಗಳನ್ನು ಎಷ್ಟು ಸಾಧ್ಯವೋ ಅಷ್ಟು ಉತ್ತಮ ಪರಿಸ್ಥಿತಿಯಲ್ಲಿ ಬಿಟ್ಟುಕೊಡುವುದು. ಅಂದರೆ, ನಾವು ಜವಾಬ್ದಾರಿಯಿಂದ ಬಳಸುವುದು. ಇರುವುದನ್ನೆಲ್ಲಾ ಹಾಳು ಮಾಡುವುದಲ್ಲ. ಇದು ಕೇವಲ ಈಗಿರುವ ಜನರಿಗಾಗಿ ಮಾತ್ರವಲ್ಲ, ಮುಂದಿನ ಜನಾಂಗಕ್ಕೂ ಉಳಿಸುವುದೇ ಆಗಿದೆ. ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಮಾಡುವುದು ಕೂಡಾ ನಮ್ಮ ಜವಾಬ್ದಾರಿ. ಹಾಗೆ ಸೃಷ್ಟಿಸಿದ ಸಂಪನ್ಮೂಲಗಳನ್ನು ನಾವು ಬಳಸಬಹುದು. ಆದರೆ, ಮುಂದಿನವರಿಗೂ ಇದನ್ನು ಉಳಿಸುವುದು ನಮ್ಮ ಜವಾಬ್ದಾರಿ. ಒಟ್ಟಿನಲ್ಲಿ, ಸುಸ್ಥಿರ ಅಭಿವೃದ್ಧಿ ಎಂದರೆ,

ಬೆಳೆಸು – ಬಳಸು – ಉಳಿಸು.







1 NO POVERTY

# ಗುರಿ 1

## ಬಡತನದಿಂದ ಮುಕ್ತಿ

**ಎಲ್ಲೆಡೆಯಲ್ಲಿಯೂ ಎಲ್ಲಾ ವಿಧದ ಬಡತನವನ್ನು ಕೊನೆಗಾಣಿಸಿ**

- ವೀರಮ್ಮ ಶಾಲೆಗೆ ಬರುವುದನ್ನು ನಿಲ್ಲಿಸಿದ್ದಾಳೆ. ಅವಳ ಸಣ್ಣ ತಮ್ಮ ಮೂರು ತಿಂಗಳ ಹಿಂದೆ ಸತ್ತು ಹೋದನಂತೆ. ಅವಳ ಅಕ್ಕ ಕೂಡಾ ಶಾಲೆ ಬಿಟ್ಟು ಕೆಲಸಕ್ಕೆ ಹೊರಟಿದ್ದಾಳೆ. ಅವರ ಕುಟುಂಬಕ್ಕೆ ಇರಲು ಮನೆಯಿಲ್ಲ. ಅವರ ತಂದೆ ತಾಯಿಗೆ ಕೂಲಿ ಸಿಗುತ್ತಿಲ್ಲ. ಅವರು ಊರು ಬಿಟ್ಟು ಕೆಲಸ ಹುಡುಕಿಕೊಂಡು ನಗರಕ್ಕೆ ಹೊರಟಿದ್ದಾರಂತೆ.

- ಸಲೀಂನ ಮನೆಯವರಿಗೆ ಬಹಳ ಕಷ್ಟವಿತ್ತು. ಅವರ ದುಡಿಮೆ ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಆಗಲೇ ಅವರಿಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಬಗ್ಗೆ ಗ್ರಾಮಪಂಚಾಯಿತಿಯವರು ಹೇಳಿದರು. ಸಲೀಂನ ಮನೆಯ ಎಲ್ಲ ವಯಸ್ಕರು ಅದರಲ್ಲಿ ನೋಂದಾಯಿಸಿಕೊಂಡರು. ಈಗ ಅವರಿಗೆ ನಿಶ್ಚಿತ ಕೂಲಿ ಸಿಗುತ್ತಿದೆ. ಸಲೀಂ ನಗುಮುಖದಿಂದ ಶಾಲೆಗೆ ಬರುತ್ತಿದ್ದಾನೆ.




ಕುಟುಂಬಗಳಲ್ಲಿನ ಬಡತನದಿಂದಾಗಿ ಎಲ್ಲಿಯೂ ಯಾರಿಗೂ, ಅದರಲ್ಲೂ ಯಾವುದೇ ಮಗುವಿಗೆ ತೊಂದರೆ ಆಗಬಾರದು. ಬಡತನದಲ್ಲಿರುವ ಜನರಿಗೆ ಎಲ್ಲ ರೀತಿಯ ಸಹಾಯಗಳು ಸರ್ಕಾರದಿಂದ ಮತ್ತು ಸಮಾಜದಿಂದ ಸಿಗಬೇಕು. ಜನ ಬಡತನದಿಂದ ಹೊರಗೆ ಬರಲು ಎಲ್ಲರೂ ನೆರವಾಗಬೇಕು. ಬಡ ಕುಟುಂಬಗಳಲ್ಲಿನ ಮಕ್ಕಳಿಗೆ ಶಿಕ್ಷಣ, ಆರೋಗ್ಯದ ಸೌಲಭ್ಯಗಳು, ಮಾಹಿತಿ ದೊರೆಯುವಂತಹ ವ್ಯವಸ್ಥೆ ಇರಬೇಕು.

## ಗುರಿ 1

# ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು


1. ಯಾವ ಮಗುವೂ ತನ್ನ ಪೋಷಕರಿಗೆ ಉದ್ಯೋಗ ಇಲ್ಲ ಅಥವಾ ಆದಾಯ ಇಲ್ಲ ಎಂಬ ಕಾರಣದಿಂದ ತೊಂದರೆಗೆ ಈಡಾಗಬಾರದು. ಪೋಷಕರಿಗೆ ಉದ್ಯೋಗ ಮತ್ತು ಸಂಪಾದನೆ ಇರುವಂತೆ ಎಲ್ಲ ಹಂತದ ಸರ್ಕಾರಗಳು ಗಮನ ಕೊಡಲೇಬೇಕು. ಎಲ್ಲರಿಗೂ ಆರೋಗ್ಯ ಸೇವೆ ದೊರೆಯಲೇಬೇಕು. ಇದನ್ನೇ ಸಾಮಾಜಿಕ ರಕ್ಷಣೆ ಎನ್ನುವುದು. ಇದರ ಫಲ ಪ್ರತಿಯೊಂದು ಬಡ ಕುಟುಂಬಕ್ಕೂ, ವಿವಿಧ ಕಾರಣಗಳಿಂದ ತೊಂದರೆಗೆ ಈಡಾಗಬಹುದಾದ ಕುಟುಂಬಗಳಿಗೆ ಸಿಗಲೇಬೇಕು. ಎಂತಹದೇ ತಾರತಮ್ಯಕ್ಕೆ ಕುಟುಂಬಗಳು ಈಡಾಗಬಾರದು ಮತ್ತು ಅವರ ಮಕ್ಕಳಿಗೆ ತೊಂದರೆ ಆಗಬಾರದು.

2. ಸಾಮಾಜಿಕವಾಗಿ ಎಲ್ಲರಿಗೂ ನೆರವಾಗುವಂತಹ ನೀತಿ, ನಿಯಮ, ಕಾನೂನುಗಳು ಜಾರಿಯಾಗುವಂತೆ ಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಹೂಡಬೇಕು. ಗ್ರಾಮೀಣ ಪ್ರದೇಶವಾಗಲೀ ನಗರವಾಗಲೀ ಅಥವಾ ಕಾಡು, ಕಣಿವೆ, ಬೆಟ್ಟ ಪ್ರದೇಶಗಳಾಗಲೀ ಬಡವರೆಂದು ಹೇಳಿ ಜನರಿಗೆ ಸೇವೆಗಳು ಸಿಗದಿರುವಂತಹ ಪರಿಸ್ಥಿತಿ ಉಂಟಾಗಬಾರದು. ಜನರಿಗೆ ಉದ್ಯೋಗ ಖಾತರಿ, ಭೂಮಿ, ತಂತ್ರಜ್ಞಾನಗಳು ಸಿಗುವಂತಾಗಿ, ಸ್ವಂತ ಉದ್ಯೋಗ ಮಾಡಬಯಸುವವರಿಗೆ ಸಾಲ ಸೌಲಭ್ಯ, ಅನುದಾನಗಳನ್ನು ಕಲ್ಪಿಸಲಾಗುವುದು.

3. ಇಂದಿನ ದಿನಗಳಲ್ಲಿ ಹವಾಮಾನ ಬದಲಾವಣೆಯಿಂದಾಗಿ ಮಳೆ ಪ್ರಮಾಣದಲ್ಲಿ ವಿಪರೀತವಾದ ಏರಿಳಿತ, ಬಿಸಿಲಿನ ಪ್ರಭಾವ, ಪ್ರವಾಹ, ಭೂಕಂಪ, ಬರ, ಪರಿಸರ ವಿನಾಶ, ಇತ್ಯಾದಿಗಳಿಂದಾಗಿ ಅನೇಕ ಕುಟುಂಬಗಳಿಗೆ ಆರ್ಥಿಕ, ಸಾಮಾಜಿಕ ತೊಂದರೆ ಉಂಟಾಗುತ್ತಿದೆ. ಅಂತಹ ಕುಟುಂಬಗಳಿಗೆ ಮತ್ತು ಮಕ್ಕಳಿಗೆ ಈ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರದ ನೆರವು ನೀಡಲಾಗುವುದು.

ನಮ್ಮ ರಾಜ್ಯದ ನೂರು ಜನರಲ್ಲಿ ಸುಮಾರು 20 ಜನ ಬಡತನ ರೇಖೆಯಡಿ ಇದ್ದಾರೆ (ಗ್ರಾಮೀಣ ಶೇ. 25 ಮತ್ತು ನಗರ ಶೇ.15). ಇವರೆಲ್ಲರೂ ಸುಸ್ಥಿತಿಗೆ ಬರಬೇಕೆಂದರೆ ಎಲ್ಲ ವಯಸ್ಕರಿಗೆ ಕನಿಷ್ಠ ವೇತನ ಖಾತರಿ ಆಗಬೇಕು. ಬಾಲಕಾರ್ಮಿಕ ಪದ್ಧತಿ ಮತ್ತು ಜೀತ ಪದ್ಧತಿಗಳನ್ನು ಕೊನೆಗಾಣಿಸಬೇಕು. ಬಡವರಿಗಾಗಿಯೇ ಇರುವ ಸರ್ಕಾರದ ಕಾರ್ಯಕ್ರಮಗಳ ಫಲ ಅವರಿಗೆ ಸಿಗುವುದನ್ನು ಎಲ್ಲರೂ ಖಾತರಿಪಡಿಸಬೇಕು.





## ನೀವೇನು ಮಾಡಬಹುದು?

- ನಿಮ್ಮ ಸಮುದಾಯದಲ್ಲಿ ಯಾರಾದರೂ ಉದ್ಯೋಗವಿಲ್ಲದ ಕಾರಣ ಕಷ್ಟದಲ್ಲಿದ್ದರೆ ಅವರಿಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ತಿಳಿಸಿ.
- ಬಡತನದಿಂದಾಗಿ ಮಕ್ಕಳು ಶಾಲೆ ಬಿಡುವುದು ಅಥವಾ ದುಡಿಮೆಗೆ ಹೋಗಿರುವ ಪ್ರಸಂಗಗಳು ಕಂಡುಬಂದರೆ, ಅದನ್ನು ನಿಮ್ಮ ಶಿಕ್ಷಕರಿಗೆ, ಗ್ರಾಮ ಪಂಚಾಯಿತಿಯವರಿಗೆ, ಸ್ಥಳೀಯ ಸ್ವಯಂ ಸೇವಾ ಸಂಘಟನೆಗಳಿಗೆ ಅಥವಾ ಚೈಲ್ಡ್‌ಲೈನ್ **1098**ಗೆ ತಿಳಿಸಿ.

2 ZERO HUNGER

# ಗುರಿ 2

## ಹಸಿವು ಮುಕ್ತ

**ಹಸಿವನ್ನು ಕೊನೆಗಾಣಿಸಿ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಟಿಕತೆಯನ್ನು ಸಾಧಿಸಿ ಹಾಗು ಸುಸ್ಥಿರ ಕೃಷಿಯನ್ನು ಉತ್ತೇಜಿಸಿ**

- ಕುಡಿಯುವ ನೀರು ತರಲು ಸುಮಾರು ಮೂರು ಕಿಲೋಮೀಟರ್ ದಿನಾ ನಡೆಯುವ ತಾಯವ್ವ ಮಕ್ಕಳ ಹೊಟ್ಟೆ ತುಂಬಿಸಲು ಬಹಳ ಕಷ್ಟ ಪಡುತ್ತಾರೆ. ಮಕ್ಕಳಿಗೆ ಹುಟ್ಟಿದ ಆರು ತಿಂಗಳವರೆಗೆ ತಾಯಿಯ ಹಾಲು ಕುಡಿಸಲೇಬೇಕು ಎಂದು ಆರೋಗ್ಯ ಕಾರ್ಯಕರ್ತೆ ಹೇಳಿದ್ದನ್ನು ತಾಯವ್ವ ಅವಳಿಗೇ ತಿನ್ನಲು ಸರಿಯಾಗಿರದಿದ್ದರೂ ಪಾಲಿಸಿದ್ದಾಳೆ. ಅವಳ ಮೂರು ಮಕ್ಕಳಿಗೆ ಈಗ 2, 4 ಮತ್ತು 6 ವರ್ಷ. ಅವರಾರು ಸರಿಯಾಗಿ ಬೆಳೆದಿಲ್ಲ, ಎತ್ತರವೂ ಇಲ್ಲ, ತೂಕವೂ ಇಲ್ಲ. ಮಕ್ಕಳಿಗೆ ರಕ್ತಹೀನತೆ ಎಂದು ಆಶಾ ಅಕ್ಕ ಹೇಳಿದ್ದಾರೆ. ಅವರ ಹಳ್ಳಿಯಲ್ಲಿ ತುಂಬಾ ಮಕ್ಕಳಿಗೆ ಹೀಗೆ ಆಗಿದ್ದು, ಅಂಗನವಾಡಿ ಕಾರ್ಯಕರ್ತೆ ಆಗಾಗ್ಗೆ ಮನೆಮನೆಗೆ ಬಂದು ಬೇಳೆ, ಮೊಟ್ಟೆ ಕೊಡುತ್ತಾರೆ. ಮಕ್ಕಳನ್ನು ಅಂಗನವಾಡಿಗೆ ಕಳಿಸಲು ಹೇಳುತ್ತಾಳೆ. ಅಲ್ಲಿ ಮಕ್ಕಳಿಗೆ ಮೊಟ್ಟೆ, ಹಾಲು ಮತ್ತು ತರಕಾರಿಯಿರುವ ಪೌಷ್ಟಿಕಾಂಶವಿರುವ ಆಹಾರ ಪ್ರತಿದಿನ ಕೊಡುತ್ತಾರಂತೆ.





ಎಲ್ಲ ಜನರಿಗೆ – ಮಕ್ಕಳು, ಹದಿಹರೆಯದವರು, ಗರ್ಭಿಣಿಯರು, ಮಕ್ಕಳಿಗೆ ಹಾಲೂಡಿಸುತ್ತಿರುವ ತಾಯಂದಿರು, ದುಡಿಮೆಯಲ್ಲಿರುವ ವಯಸ್ಕರು ಮತ್ತು ವೃದ್ಧರು, ರೋಗಿಗಳು– ಎಲ್ಲರಿಗೂ ಕಾಲಕಾಲಕ್ಕೆ ಸರಿಯಾದ ಆಹಾರ ದೊರಕಲೇಬೇಕು. ಆಹಾರ ಪೌಷ್ಟಿಕಾಂಶಗಳನ್ನು ಹೊಂದಿರಬೇಕು. ದೇಹಕ್ಕೆ ಬೇಕಾದ ಶಕ್ತಿ ಕೊಡುವಂತಿರಬೇಕು. ಬೆಳವಣಿಗೆಗೆ ಸಹಾಯ ಮಾಡಬೇಕು. ಹೀಗಾಗಿ, ಎಲ್ಲ ಜನರಿಗೆ ಆಹಾರ ದೊರಕಲು ಸುಸ್ಥಿರ ಕೃಷಿಗೆ ಎಲ್ಲರೂ ಬೆಂಬಲ ನೀಡಬೇಕು. ಹೈನುಗಾರಿಕೆ, ಮೀನುಗಾರಿಕೆಗೆ ಪ್ರೋತ್ಸಾಹ ಕೊಡಬೇಕು. ಪ್ರಾಣಿ, ಪಕ್ಷಿಗಳು ಮತ್ತು ಸಸ್ಯಗಳ ಪ್ರಬೇಧಗಳನ್ನು ಉಳಿಸಿಕೊಳ್ಳಬೇಕು. ಇದಕ್ಕಾಗಿ ನೀರು, ಕಾಡು, ಬೆಟ್ಟ ಮತ್ತು ಭೂಮಿಯನ್ನೂ ರಕ್ಷಿಸಬೇಕು.

# ಗುರಿ 2

## ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು

1. ಮಕ್ಕಳು, ತಾಯಂದಿರು ಮತ್ತು ವೃದ್ಧರಿಗಾಗಿ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಂಡು ಅವರಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸಲಾಗುವುದು. ವರ್ಷದುದ್ದಕ್ಕೂ ಇವರಿಗೆ ಪೌಷ್ಟಿಕತೆಯುಳ್ಳ ಸಾಕಷ್ಟು ಆಹಾರವನ್ನು ಒದಗಿಸುವುದನ್ನು ಖಾತರಿ ಮಾಡಲಾಗುವುದು.


2. ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವುದು ಮತ್ತು ಸಣ್ಣ ಕೃಷಿಕರ ಆದಾಯ ಹೆಚ್ಚಿಸುವುದು. ಅದರಲ್ಲೂ ಮಹಿಳೆಯರು ಮತ್ತು ಮೂಲ ನಿವಾಸಿಗಳ ಆದಾಯ ಹೆಚ್ಚಳಕ್ಕೆ ಗಮನ ನೀಡಲಾಗುತ್ತದೆ. ಪರಿಸರವನ್ನು ಗೌರವಿಸಿ, ಪ್ರತಿ ವಿಭಾಗದಲ್ಲಿನ ಜೀವವೈವಿಧ್ಯವನ್ನು ಕಾಪಾಡಿ ಅಲ್ಲಿನ ಸಂಪನ್ಮೂಲಗಳ ಕೊಳ್ಳೆಯನ್ನು ತಡೆಯಲಾಗುವುದು.


3. ಅಕಾಲಿಕ ಮಳೆ, ಪ್ರವಾಹ, ಬರ ಇತ್ಯಾದಿ ವೈಪರೀತ್ಯಗಳನ್ನು ಮತ್ತು ಅವುಗಳ ಕೆಟ್ಟ ಪರಿಣಾಮ ತಡೆಯಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು.

4. ನಮ್ಮ ಪರಿಸರದಲ್ಲಿರುವ ವೈವಿಧ್ಯಮಯವಾದ ಬೀಜ, ಸಸ್ಯಸಂಕುಲ, ಬೆಳೆಗಳನ್ನು ಮತ್ತು ಪ್ರಾಣಿ ವೈವಿಧ್ಯ (ಕಾಡು ಮತ್ತು ನಾಡಿನಲ್ಲಿರುವ ಪ್ರಾಣಿಗಳು)ವನ್ನು ಉಳಿಸಿ, ನಮ್ಮ ಪರಿಸರದಲ್ಲಿ ದೊರೆಯುವ ಎಲ್ಲ ಉತ್ಪನ್ನಗಳು, ಸಂಪನ್ಮೂಲಗಳನ್ನು ಕಾಳಜಿಯಿಂದ ಎಲ್ಲರಿಗೂ ದೊರೆಯುವಂತೆ ಬಳಸಲಾಗುವುದು.

**ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಈ ರೀತಿಯಾಗಿದೆ**
(ಮೂಲ: ರಾಷ್ಟ್ರೀಯ ಆರೋಗ್ಯ ಕುಟುಂಬ ಸಮೀಕ್ಷೆ 4–2015–16)

| | |
|---|---|
| ರಕ್ತಹೀನತೆಯಿಂದ ಬಳಲುತ್ತಿರುವ 6–59 ತಿಂಗಳ ಮಕ್ಕಳು | 60.9% |
| ರಕ್ತಹೀನತೆಯಿಂದ ಬಳಲುತ್ತಿರುವ 15–49 ವರ್ಷದ ಗರ್ಭಿಣಿ ಮಹಿಳೆಯರು | 45.4% |
| ವಯಸ್ಸಿಗೆ ತಕ್ಕ ತೂಕವಿಲ್ಲದ 5 ವರ್ಷದೊಳಗಿನ ಮಕ್ಕಳು | 35.2% |
| ತೂಕಕ್ಕೆ ತಕ್ಕ ಎತ್ತರವಿಲ್ಲದ 5 ವರ್ಷದೊಳಗಿನ ಮಕ್ಕಳು | 36.2% |
| ವಯಸ್ಸಿಗೆ ತಕ್ಕ ಎತ್ತರವಿಲ್ಲದ 5 ವರ್ಷದೊಳಗಿನ ಮಕ್ಕಳು | 36.2% |





### ನೀವೇನು ಮಾಡಬಹುದು?

- ಅಪೌಷ್ಟಿಕತೆ ಇರುವ ಮಕ್ಕಳು ಮತ್ತು ಹದಿವಯಸ್ಸಿನವರು, ತಾಯಂದಿರಿಗೆ ಅಂಗನವಾಡಿಗಳಲ್ಲಿ ಪೌಷ್ಟಿಕ ಆಹಾರ ಕೊಡುತ್ತಿರುವ ಕುರಿತು ತಿಳಿಸಿ.
- ನಿಮ್ಮ ಶಾಲೆಗಳಲ್ಲಿ 'ಅಕ್ಷರ ದಾಸೋಹ' ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಲು ಎಲ್ಲರಿಗೂ ತಿಳಿಸಿ. ಆಹಾರದ ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ತಿಳಿಸಿ.

3 GOOD HEALTH AND WELL-BEING


# ಗುರಿ 3

## ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

**ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸಿ.**

- ಪ್ರೌಢಶಾಲೆಯ ಕೆಲವು ಮಕ್ಕಳು ದಿನಾ ಶಾಲೆ ಬಿಟ್ಟೊಡನೆ ಓಡಿ ಹೋಗಿ ಕೆರೆಯ ಪಕ್ಕದ ಪಾಳು ಗುಡಿ ಹತ್ತಿರ ಸೇರ್ಕೊಳ್ತಾರೆ. ಅದೇನೋ ತಿನ್ನೋದೋ, ಅಗಿಯೋದೋ, ಸೇದೋದೋ ಮಾಡ್ತಾರಂತೆ. ಮೊದಮೊದಲು ಇದೆಲ್ಲಾ ತಮಾಷೆಯಾಗಿ ಕಂಡಿತ್ತು. ಆದರೆ, ಈ ಗುಂಪಿನಲ್ಲಿದ್ದ 13 ವರ್ಷದ ಹುಡುಗನೊಬ್ಬ ರಕ್ತ ಕಾರಿಕೊಂಡು ಸತ್ತು ಹೋದಾಗ ಎಲ್ಲರೂ ಗಾಬರಿಯಾದರು.

- ಶಾಲೆ ಕಲಿಯುತ್ತಿದ್ದ ಚೂಟಿ ಹುಡುಗಿ ಶಾರದಳಿಗೆ ಮದುವೆಯಾಯಿತು. ಊರೆಲ್ಲೆಲ್ಲಾ ಸಂಭ್ರಮ. ವರ್ಷದಲ್ಲೇ ಶಾರದ ಹೆರಿಗೆಗೆ ಬಂದಳು. ಚಟುವಟಿಕೆಯಿಂದ ಇದ್ದ ಹುಡುಗಿ ತುಂಬಾ ನಿಶ್ಯಕ್ತಳಾಗಿದ್ದಳು. ಹೆರಿಗೆಯಲ್ಲಿ ತೊಂದರೆಯಾಗಿ ಶಾರದಾ ಮತ್ತು ಅವಳ ಹೊಟ್ಟೆಯಲ್ಲಿದ್ದ ಮಗು ಇಬ್ಬರೂ ಸತ್ತು ಹೋದರು. ಪೊಲೀಸರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಊರಿಗೆ ಬಂದು ಸಮುದಾಯದಲ್ಲಿ ಸಭೆ ನಡೆಸಿ ಬಾಲ್ಯವಿವಾಹ ಮಾಡಬಾರದು ಎಂದು ತಿಳಿ ಹೇಳಿದರು.



ಎಲ್ಲ ಜನರು ಆರೋಗ್ಯವಾಗಿದ್ದರೆ ಮಾತ್ರ 2030ರೊಳಗೆ ಜಗತ್ತು ಸುಸ್ಥಿರ ಬದುಕನ್ನು ಕಾಣಬಹುದು. ಈಗಲೂ ವಿವಿಧ ತಡೆಗಟ್ಟಬಹುದಾದ ರೋಗಗಳಿಗೆ ಮಕ್ಕಳು, ಹದಿಹರೆಯದವರು, ವಯಸ್ಕರು ಮತ್ತು ವೃದ್ಧರು ಬಲಿಯಾಗುತ್ತಿದ್ದಾರೆ. ಹೆರಿಗೆ ಸಮಯದಲ್ಲಿ ಸಾಯುವ ತಾಯಂದಿರು, ಮಕ್ಕಳು, ಹೆಂಡ ಸಾರಾಯಿ, ತಂಬಾಕು, ಇತ್ಯಾದಿ ಮಾದಕ ವಸ್ತುಗಳ ಬಳಕೆಗೆ ಬಲಿಯಾಗುವವರು, ಕಾರ್ಖಾನೆಗಳು ಬಿಡುತ್ತಿರುವ ತ್ಯಾಜ್ಯದ ವಿನಾಶಕಾರಿ ವಿಷದಿಂದ ಪರಿಸರದ ನಾಶ, ಅದರಿಂದಾಗಿ ರೋಗಗಳು, ಇತ್ಯಾದಿ ನಮ್ಮನ್ನು ಬಾಧಿಸುತ್ತಿದೆ. ಇಂತಹವುಗಳಿಂದ ತಪ್ಪಿಸಿಕೊಳ್ಳಲು ಮಕ್ಕಳು ಉತ್ತಮ ಆರೋಗ್ಯಕಾರಿ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಕಸ ವಿಲೇವಾರಿಯನ್ನು ಎಚ್ಚರಿಕೆಯಿಂದ ಮಾಡುವುದು, ನೀರಿನ ಬಳಕೆಯಲ್ಲಿ ಎಚ್ಚರಿಕೆ ಇತ್ಯಾದಿಯಲ್ಲದೆ, ಕಾಲಕಾಲಕ್ಕೆ ಸೂಕ್ತವಾದ ರೋಗನಿರೋಧಕಗಳನ್ನು ಪಡೆಯುವುದೂ ಇಲ್ಲಿ ಮುಖ್ಯವಾಗಿದೆ.

## ಗುರಿ 3

# ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು

- ಹೆರಿಗೆ ಸಮಯದಲ್ಲಿ ತಾಯಂದಿರ ಮರಣವನ್ನು ಮತ್ತು ನವಜಾತ ಶಿಶುಗಳು ಮತ್ತು ಐದು ವರ್ಷದೊಳಗಿನ ಮಕ್ಕಳ ಮರಣವನ್ನು ತಡೆಗಟ್ಟುವುದು. ಕುಟುಂಬ ಯೋಜನೆಯ ಪ್ರಾಮುಖ್ಯತೆಯನ್ನು ಎಲ್ಲ ಸಮುದಾಯಗಳಿಗೆ ತಿಳಿಸುವುದು.
- ಎಚ್.ಐ.ವಿ./ಏಡ್ಸ್ ಮತ್ತಿತರ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು, ಹೆಪಟೈಟಿಸ್ ಮತ್ತು ನೀರಿನಿಂದ ಹರಡುವ ರೋಗಗಳನ್ನು ತಡೆಗಟ್ಟುವುದು.
- ಮಾದಕ ವಸ್ತುಗಳ ಬಳಕೆ ವಿರುದ್ಧ ಸಮುದಾಯಗಳಲ್ಲಿ, ಬಹಳ ಪ್ರಮುಖವಾಗಿ ಮಕ್ಕಳು ಮತ್ತು ಯುವಜನರ ನಡುವೆ ಮಾಹಿತಿ ಪಸರಿಸುವುದು ಮತ್ತು ಆರೋಗ್ಯ ಹಾಗೂ ಮಾನಸಿಕ ಆರೋಗ್ಯ ಕುರಿತು ಪ್ರಚಾರ ಮಾಡುವುದು.
- ಪ್ರತಿಯೊಬ್ಬರಿಗೂ ಆರೋಗ್ಯದ ಹಕ್ಕಿನ ಸೌಲಭ್ಯಗಳು ಸಿಗುವುದನ್ನು ಖಾತರಿ ಮಾಡಿಕೊಂಡು, ಎಲ್ಲರಿಗೂ ಉತ್ತಮ ಗುಣಮಟ್ಟದ ವೈದ್ಯಕೀಯ ನೆರವು, ಆರೈಕೆ ಮತ್ತು ಉಚಿತವಾಗಿ ಹಾಗೂ ಕೈಗೆಟಕುವ ಬೆಲೆಯಲ್ಲಿ ಔಷಧಿಗಳು ಮತ್ತು ಲಸಿಕೆಗಳು ದೊರೆಯುವಂತೆ ಏರ್ಪಾಟು ಮಾಡುವುದು.
- ಗಾಳಿ, ನೀರು ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಲು ಪರಿಸರಕ್ಕೆ ವಿಷಕಾರಿ ಅನಿಲಗಳು, ತ್ಯಾಜ್ಯಗಳನ್ನು ಬಿಡುವುದನ್ನು ತಡೆಗಟ್ಟುವುದು.

**ನಮ್ಮ ರಾಜ್ಯದಲ್ಲಿ ಶಿಶುಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ಈ ರೀತಿಯಾಗಿದೆ.**


(ಮೂಲ: ಎಸ್.ಆರ್.ಎಸ್. 2015 ಮತ್ತು 2011-13)

| | |
|---|---|
| ಹುಟ್ಟಿದ ನಾಲ್ಕು ವಾರದೊಳಗೆ ಸಾಯುವ ಮಕ್ಕಳ ಪ್ರಮಾಣ | 19 |
| ಹುಟ್ಟಿದ ಒಂದು ವರ್ಷದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ | 28 |
| ಹುಟ್ಟಿದ ಐದು ವರ್ಷದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ | 31 |
| ಹೆರಿಗೆ ಸಮಯದಲ್ಲಿ ಮರಣ ಹೊಂದುವ ತಾಯಂದಿರ ಪ್ರಮಾಣ | 133 |

**ಮರಣ ಪ್ರಮಾಣ ಎಂದರೆ ಜೀವಂತ ಜನಿಸುವ ಪ್ರತಿ 1000 ಶಿಶುಗಳಲ್ಲಿ ಮರಣ ಹೊಂದುವ ಮಕ್ಕಳು**







## ನೀವೇನು ಮಾಡಬಹುದು?

- ಬಾಲ್ಯವಿವಾಹಗಳು ನಡೆಯುವ ಕುರಿತು ಮಾಹಿತಿ ದೊರೆತ ಕೂಡಲೇ ಚೈಲ್ಡ್‌ಲೈನ್ 1098ಗೆ ಮಾಹಿತಿ ಕೊಡಿ.
- ಮಾದಕ ವಸ್ತುಗಳ ಬಳಕೆ ಯಾರಾದರೂ ಮಾಡುತ್ತಿದ್ದರೆ ಅವರಿಗೆ ಅದರಿಂದ ಹೊರಗೆ ಬರಲು ಸಹಾಯ ಮಾಡಲು ವೈದ್ಯರು ಮತ್ತು ಆಪ್ತ ಸಮಾಲೋಚಕರನ್ನು ಸಂಪರ್ಕಿಸಲು ಸಹಾಯ ಮಾಡಿ.

4 QUALITY EDUCATION

# ಗುರಿ 4

# ಗುಣಮಟ್ಟದ ಶಿಕ್ಷಣ

**ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸಿ.**

- ನಾಲ್ಕನೇ ತರಗತಿ ಓದುತ್ತಿದ್ದ ಗಾಯತ್ರಿ ರಸ್ತೆ ಅಪಘಾತದಲ್ಲಿ ಎರಡೂ ಕಾಲು ಕಳೆದುಕೊಂಡಿದ್ದಳು. 'ತನ್ನ ಮಗಳ ಮುಂದಿನ ಬದುಕೇನು? ಇವಳಿಗೆ ಮುಂದಿನ ಶಿಕ್ಷಣ ಸಾಧ್ಯವೇ' ಎಂದು ಅವಳ ತಂದೆ ಗಣಪತಿ ಚಿಂತಿಸುತ್ತಿದ್ದ. ಪತ್ರಿಕೆ ಓದುತ್ತಿದ್ದ ಗಾಯತ್ರಿ 'ಅಪ್ಪಾ ನೋಡಿ ಪತ್ರಿಕೆಯಲ್ಲಿ ಏನು ಬಂದಿದೆ ಅಂತ, ಸಮನ್ವಯ ಶಿಕ್ಷಣದಲ್ಲಿ ಅಂಗವಿಕಲ ಮಕ್ಕಳಿಗೂ ಮುಖ್ಯವಾಹಿನಿ ಶಾಲೆಗಳಲ್ಲಿ ಶಿಕ್ಷಣ ನೀಡಬೇಕಂತೆ. ಶಾಲೆಗೆ ಬರಲಾಗದ ಹಲವು ಅಂಗವಿಕಲತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕೆ ವಿಶೇಷ ತರಬೇತಿ ಪಡೆದ ಶಿಕ್ಷಕರು ಮಕ್ಕಳ ಮನೆಗೇ ಬರುತ್ತಾರಂತೆ'. ಮಗಳು ಓದಿದ ಈ ಸುದ್ದಿ ಕೇಳಿ ಗಣಪತಿ ರೋಮಾಂಚನಗೊಂಡರು.

- ರಮೇಶನ ತಂದೆಯನ್ನು ದೊಡ್ಡ ರೈತರು ಎನ್ನಬಹುದು. ಸುಮಾರು 15 ಎಕರೆ ಹೊಲಗದ್ದೆಗಳ ಮಾಲೀಕರು. ಉತ್ತುವ ಬಿತ್ತುವ ಕಾಲ ಬಂತು ಎಂದರೆ ಶಾಲೆಗೆ ಹೋಗುವುದನ್ನು ಬಿಟ್ಟು ರಮೇಶ ತಂದೆಯ ಜೊತೆ ಹೊಲ, ಗದ್ದೆಯಲ್ಲಿ ಕೆಲಸಕ್ಕೆ ನಿಲ್ಲಬೇಕು. ರಾತ್ರಿ ಹೊಲ ಕಾಯಲು ಹೋಗಲೇಬೇಕು. ಆಮೇಲೆ ಕಟಾವು ಕಾಲ. ರಮೇಶನಿಗೆ ಕಲಿತು ಏನನ್ನಾದರೂ ಸಾಧಿಸುವ ಡಾಕ್ಟರ್ ಆಗುವ ಬಯಕೆ. ಆದರೆ ನಿರಂತರವಾಗಿ ಶಾಲೆಗೆ ಹೋಗಲಾಗದ ಪರಿಸ್ಥಿತಿಯಿಂದ ಪಾಠ ಪ್ರವಚನಗಳಲ್ಲಿ ಹಿಂದಿದ್ದ. ತನ್ನ ಗೆಳೆಯರು ಪಾಠಗಳನ್ನು ಕಲಿಯುತಿದ್ದಾರೆ, ತಾನೇನೂ ಓದಿಲ್ಲ ಎಂಬ ಕೊರತೆ ರಮೇಶನನ್ನು ಕಾಡುತ್ತಿತ್ತು. ಹಾಗಾಗಿ ಅವನು ಗೆಳೆಯರನ್ನು ಬಿಟ್ಟ, ಓದುವುದನ್ನು ಬಿಟ್ಟ. ಕಡೆಗೊಂದು ದಿನ 7ನೇ ತರಗತಿಯಲ್ಲಿದ್ದಾಗ ಶಾಲೆಯನ್ನು ಬಿಟ್ಟು ಅಪ್ಪನೊಂದಿಗೆ ಕೇವಲ ಹೊಲದ ಕೆಲಸಕ್ಕೇ ನಿಂತ.




ಮಕ್ಕಳಿಗೆ ಶಿಕ್ಷಣದ ಆವಶ್ಯಕತೆ ಮುಖ್ಯವಾಗಿದೆ. ಶಿಕ್ಷಣ ಮಕ್ಕಳ ಹಕ್ಕು. ಶಿಕ್ಷಣದ ಅವಕಾಶಗಳನ್ನು ಮಕ್ಕಳಿಗೆ ಒದಗಿಸುವುದು ವಯಸ್ಕ ಸಮಾಜದ ಕರ್ತವ್ಯ. ಆದರೂ, ನಮ್ಮ ದೇಶದಲ್ಲಿ ನೂರಾರು ಸಾವಿರಾರು ಮಕ್ಕಳು ನೂರಾರು ನೆಪಗಳಿಂದಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನೆಲ್ಲಾ ಶಾಲೆಗೆ ಕರೆತಂದು ಮಕ್ಕಳಿಗೆ ಶಿಕ್ಷಣ ನೀಡುವ ಹೊಣೆ ಸರ್ಕಾರ ಹಾಗೂ ಪೋಷಕರ ಮೇಲಿದೆ. ಇದಕ್ಕಾಗಿ ಸರ್ಕಾರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ 2009ನ್ನು ಹೊರಡಿಸಿದೆ. 6 ರಿಂದ 14 ವರ್ಷದೊಳಗಿನ ಮಕ್ಕಳನ್ನು ಶಾಲೆಗೆ ಸೇರಿಸಿ ಶಿಕ್ಷಣ ಒದಗಿಸುವುದು ಸರ್ಕಾರ ಮತ್ತು ಪೋಷಕರ ಕರ್ತವ್ಯ ಎಂದು ಸಂವಿಧಾನದಲ್ಲೂ ಹೇಳಿದೆ.

# ಗುರಿ 4


## ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು

- ದೇಶದಲ್ಲಿ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ. ಅದಕ್ಕಾಗಿ ತರಬೇತಿ ಹೊಂದಿದ ಶಿಕ್ಷಕರಿರುವ, ಸುರಕ್ಷಿತ ಶಾಲೆಗಳನ್ನು ನಡೆಸುವುದು.
- ಮಕ್ಕಳು ಯಾವುದೇ ಪರಿಸ್ಥಿತಿಯಲ್ಲಿ ಇದ್ದರೂ ಅವರನ್ನು ಪುನರ್ವಸತಿಗೊಳಿಸಿ ಅವರಿಗೆ ನುರಿತ ಶಿಕ್ಷಕರ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ನೀಡುವುದು.
- ಶಿಕ್ಷಣದಿಂದ ಯಾವುದೇ ಮಕ್ಕಳು ಹೊರಗುಳಿಯಬಾರದು. ಹಾಗಾಗಿ ಯಾವುದೇ ರೀತಿಯ ತಾರತಮ್ಯಕ್ಕೊಳಗಾಗದಂತೆ ನೋಡಿಕೊಂಡು ಅಂಗವಿಕಲ ಮಕ್ಕಳಿಗೂ ಅವರ ಆವಶ್ಯಕತೆಗೆ ತಕ್ಕಂತೆ ಶಿಕ್ಷಣ ನೀಡುವುದು.
- ಮಕ್ಕಳು ಪಡೆಯುವ ಶಿಕ್ಷಣದಿಂದ ಅವರಲ್ಲಿ ಜೀವನ ಕೌಶಲ್ಯ, ಸೃಜನಾತ್ಮಕತೆ, ಆತ್ಮಸ್ಥೈರ್ಯ ಹೆಚ್ಚಿಸುವಂತಹ ಶಿಕ್ಷಣ ಒದಗಿಸುವುದು. ಮಕ್ಕಳಿಗಾಗಿ ವಿದ್ಯಾರ್ಥಿವೇತನ, ವೃತ್ತಿಪರ ಶಿಕ್ಷಣ, ವಿದ್ಯಾರ್ಥಿ ನಿಲಯಗಳನ್ನು ಹೆಚ್ಚಿಸುವುದು.

ನಮ್ಮ ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ–2009 ಜಾರಿಯಲ್ಲಿದೆ. ಇದರಿಂದ ಲಕ್ಷಗಟ್ಟಲೆ ಲಕ್ಷ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ನಮ್ಮ ಸರ್ಕಾರ ಸಫಲತೆಯನ್ನು ಹೊಂದಿದೆ. ನಮ್ಮ ಸಂವಿಧಾನ ವಿಧಿ 21 (ಎ) ಮಕ್ಕಳ ಶಿಕ್ಷಣದ ಹಕ್ಕನ್ನು ಎತ್ತಿ ಹಿಡಿಯುತ್ತದೆ. ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಇನ್ನೂ 1,22,138 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. (2017)







### ನೀವೇನು ಮಾಡಬಹುದು?

1. ನಿಮ್ಮ ಮನೆಗಳ ಸುತ್ತಮುತ್ತ ಶಾಲೆಗೆ ಹೋಗದಿರುವ ಮಕ್ಕಳು ಕಂಡು ಬಂದರೆ ಅವರಿಗೆ ಶಿಕ್ಷಣದ ಮಹತ್ವ ಕುರಿತು ತಿಳಿಸಿ, ಶಾಲೆಗೆ ಕಳುಹಿಸುವ ಪ್ರಯತ್ನ ಮಾಡಿ. ನಿಮ್ಮ ಶಿಕ್ಷಕರಿಗೆ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ ವಿವರ ನೀಡಿ.
2. ಮಕ್ಕಳು ಶಾಲೆಗೆ ಹೋಗದೇ ಬಾಲಕಾರ್ಮಿಕರಾಗಿರುವುದು ತಿಳಿದು ಬಂದರೆ, ಚೈಲ್ಡ್‌ಲೈನ್ 1098ಗೆ ಕರೆಮಾಡಿ ಮಾಹಿತಿ ಕೊಡಿ. ಇದು ಉಚಿತ ದೂರವಾಣಿ ಕರೆ. ನಿಮ್ಮ ವಿವರಗಳನ್ನು ಅಲ್ಲಿ ನೀಡಬೇಕಿಲ್ಲ.




5 GENDER EQUALITY

# ಗುರಿ 5

## ಲಿಂಗ ಸಮಾನತೆ

**ಲಿಂಗ ಸಮಾನತೆಯನ್ನು ಸಾಧಿಸಿ ಮತ್ತು ಮಹಿಳೆಯರು ಹಾಗೂ ಹೆಣ್ಣು ಮಕ್ಕಳನ್ನು ಸಶಕ್ತರನ್ನಾಗಿಸಿ.**

- ಅಕ್ಕ ಫಾತಿಮ ತನ್ನ ಜೊತೆ ಆಡುತ್ತಾಳೆ. ನನಗೆ ಊಟ ಮಾಡಿಸುತ್ತಾಳೆ. ನನ್ನ ಕಂಡ್ರೆ ಅವಳಿಗೆ ತುಂಬಾ ಪ್ರೀತಿ. ನನಗೂ ಅಕ್ಕನನ್ನು ಕಂಡ್ರೆ ಇಷ್ಟ. ಆದ್ರೆ ಅಬ್ಬು, ಅಮ್ಮಿ ಅಕ್ಕನ್ನ ಯಾಕೆ ಶಾಲೆಗೆ ಕಳಿಸೋದಿಲ್ಲ? ಯಾವಾಗಲೂ ಕೆಲಸ ಮಾಡು, ಅಡುಗೆ ಮಾಡು ಅಂತಾನೇ ಇರ್ತಾರೆ? ಯಾಕೆ... ಯಾಕೆ? ಈ ಪ್ರಶ್ನೆಗಳು 12 ವರ್ಷದ ಸಲೀಂನನ್ನು ಬಾಲ್ಯದಿಂದಲೂ ಕಾಡಿದೆ. ಅವನಿಗಿಂತ ಮೂರು ವರ್ಷ ದೊಡ್ಡವಳಾದ ಅಕ್ಕ ಫಾತಿಮಾಗೆ ಮದುವೆ ಸಿದ್ಧತೆ ನಡೆದಿದೆ...
- ಹತ್ತು ವರ್ಷದ ವೇಣುಗೆ ಪಕ್ಕದ ಮನೆ ಆಂಟಿ ಕೇಳಿದ್ರು 'ಲೋ ವೇಣು ನಿನಗೆ ತಂಗಿ ಬರ್ತಾಳಂತೆ. ಹೌದೇನೋ?' ಮನೆಯಲ್ಲಿ ಮಗು ಆಗುತ್ತೆ ಅಂತ ಆಡ್ತಿದ್ದ ಮಾತುಗಳನ್ನ ವೇಣು ಕೇಳಿದ್ದ. 'ಹೌದು ಆಂಟಿ. ತಂಗಿ ಪಾಪು ಬರುತ್ತೆ. ನಾನು ಕಥೆ ಹೇಳ್ತೀನಿ, ಆಟ ಆಡಿಸ್ತೀನಿ. ಸ್ಕೂಲಿಗೂ ಕರ್ಕೊಂಡ್ಹೋಕ್ತೀನಿ' ಎಂದು ತನ್ನೆಲ್ಲಾ ಕನಸುಗಳನ್ನು ಆಂಟಿ ಮುಂದೆ ವೇಣು ಬಿಚ್ಚಿಟ್ಟ. ಆಟ ಮುಗಿಸಿ ಮನೆಗೆ ಓಡಿದ ವೇಣು, ಅಮ್ಮನ ಬಳಿ ಬಂದು, 'ಅಮ್ಮ ಅಮ್ಮ ತಂಗಿ ಪಾಪುಗೆ ಏನು ಹೆಸರು?' ಎಂದ. ವೇಣು ತಾಯಿ ಅವನನ್ನು ಅವನನ್ನ ಬಿಗಿದಪ್ಪಿ ಅಳುತ್ತಾ, 'ತಂಗಿನೂ ಇಲ್ಲ, ಪಾಪುನೂ ಇಲ್ಲ. ತಂಗಿ ಬರಲ್ಲಪ್ಪ ಹೊರಟೋದ್ಲು' ಎಂದಳು. ಆಗಲೇ ಅವರಪ್ಪ ಬಂದು, 'ಸಾಕು ಅತ್ತಿದ್ದು, ಹುಡುಗನ್ನ ಗಂಡಸಿನ ಹಾಗೆ ಬೆಳೆಸಬೇಕು. ಅಳು ಕಲಿಸೋದಲ್ಲ, ಏಳು ಮೇಲೆ. ಅಡುಗೆಗೆ ಇಡು' ಎಂದು ಕೂಗುತ್ತಾರೆ. ಏನೂ ಅರ್ಥವಾಗದೆ ವೇಣು ಅಪ್ಪ ಅಮ್ಮನನ್ನ ನೋಡುತ್ತಿದ್ದ.



ಲಿಂಗ ಅಸಮಾನತೆ, ಲಿಂಗ ತಾರತಮ್ಯ, ನಮ್ಮ ದೇಶಕ್ಕೆ ಅಂಟಿರುವ ಶಾಪ, ಹೆಣ್ಣು ಮಕ್ಕಳಿಗೆ ಯಾವದೇ ರೀತಿಯ ಅವಕಾಶಗಳನ್ನು ನೀಡದೆ ಮನೆಕೆಲಸ, ಸೇವೆಗೆ ಮಾತ್ರ ಎಂದುಕೊಂಡಿರುವ ನಮ್ಮ ಸಮಾಜದ ಮನಸ್ಸು, ವರ್ತನೆ, ಬದಲಾಗಬೇಕಿದೆ. ಹೆಣ್ಣು ಭ್ರೂಣಹತ್ಯೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಲೈಂಗಿಕ ಶೋಷಣೆ ಈ ಎಲ್ಲಕ್ಕೂ ಹೆಣ್ಣು ಮಕ್ಕಳು ಬಲಿಯಾಗುವುದನ್ನು ತಪ್ಪಿಸಿ ಹೆಣ್ಣು ಮಕ್ಕಳನ್ನು ಸಶಕ್ತಗೊಳಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಹೊಣೆಗಾರಿಕೆ ಸಮಾಜದ ಮೇಲಿದೆ.

## ಗುರಿ 5


# ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು

- ಲಿಂಗ ತಾರತಮ್ಯವನ್ನು ಸಂಪೂರ್ಣವಾಗಿ ನಿಷೇಧಿಸುವ ಮೂಲಕ ಸೂಕ್ತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಭ್ರೂಣಲಿಂಗ ಪತ್ತೆಯನ್ನು ನಿಷೇಧಿಸುವುದು. ಹೆಣ್ಣು ಭ್ರೂಣ ಹತ್ಯೆ ಮಾಡುವವರಿಗೆ ಶಿಕ್ಷೆ ವಿಧಿಸುವುದು.
- ಹೆಣ್ಣು ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ, ಉದ್ಯೋಗ, ಕೌಶಲ್ಯ ಕಲಿಕೆಗಳಲ್ಲಿ ಮೀಸಲಾತಿ ಕಲ್ಪಿಸುವುದು.
- ಹೆಣ್ಣು ಮಕ್ಕಳ ದಿನ ಆಚರಣೆ, ಲಿಂಗ ಸಮಾನತೆ ಮತ್ತು ಮಹಿಳೆಯರ ಕೊಡುಗೆಗಳು, ಹೆಣ್ಣು ಮಕ್ಕಳು ಮತ್ತು ಮಹಿಳಾ ಪರ ಇರುವ ನೀತಿ, ಕಾನೂನುಗಳನ್ನು ಕುರಿತು ಶಾಲಾ ಪಠ್ಯಗಳಲ್ಲಿ ಅಳವಡಿಸುವುದು.
- ತಾರತಮ್ಯರಹಿತ ವಾತಾವರಣ ನಿರ್ಮಾಣಕ್ಕೆ ಸಂಪೂರ್ಣ ಪ್ರಯತ್ನ ಮತ್ತು ಹೆಣ್ಣು ಮಕ್ಕಳ ಸಾಗಣೆ ಮತ್ತು ಮಾರಾಟ ತಡೆಗಟ್ಟುವುದು.




ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ರಕ್ಷಣೆಗೆ ವಿಶೇಷ ಕಾನೂನುಗಳಿದ್ದರೂ ಹೆಣ್ಣು ಮಕ್ಕಳ ರಕ್ಷಣೆ ಮಾಡಲಾಗುತ್ತಿಲ್ಲ. ಹೆಣ್ಣು ಎಂದು ಕೀಳಾಗಿ ನೋಡುವ ಮನೋಭಾವವನ್ನು ಬದಲಿಸಬೇಕಿದೆ. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಮಕ್ಕಳ ಹತ್ಯೆಯಿಂದ ನಮ್ಮ ರಾಜ್ಯದಲ್ಲಿ 0–6 ವರ್ಷದೊಳಗಿನ ಲಿಂಗಾನುಪಾತ 949ರಷ್ಟಿದೆ. ಹೀಗೇ ಮುಂದುವರೆದರೆ ಮಾನವ ಜನಾಂಗವೇ ನಶಿಸಿ ಹೋಗುತ್ತದೆ.



## ನೀವೇನು ಮಾಡಬಹುದು?

1. ನಿಮ್ಮ ಶಾಲೆ ಮತ್ತು ಸಮುದಾಯದಲ್ಲಿ ಹೆಣ್ಣು ಮಕ್ಕಳಿಗಾಗುವ ತಾರತಮ್ಯವನ್ನು ಗುರುತಿಸಿ ಪಟ್ಟಿ ಮಾಡಿ, ಅದನ್ನು ನಿಮ್ಮ ಮಕ್ಕಳ ಹಕ್ಕುಗಳ ಸಂಘದಲ್ಲಿ ಚರ್ಚಿಸಿ ಅಂತಹ ತಾರತಮ್ಯಗಳನ್ನು ತಡೆಯಲು ಕ್ರಮಗಳನ್ನು ಕಂಡುಕೊಳ್ಳಿ.
2. ಯಾವ ಕಾರಣಕ್ಕಾಗಿ ಹೆಣ್ಣು ಮಕ್ಕಳಿಗೆ ಮೀಸಲಾತಿ ಆವಶ್ಯಕತೆಯಿದೆ ಎಂದು ಗಂಡು ಮಕ್ಕಳಿಗೆ ಅರಿವು ಮೂಡಿಸಿ.
3. ನೀವು ಮತ್ತು ನಿಮ್ಮ ಗೆಳೆಯರು 'ನಾವೆಂದೂ ಲಿಂಗಾಧಾರಿತವಾಗಿ ತಾರತಮ್ಯ ಮಾಡುವುದಿಲ್ಲ' ಎಂದು ಪ್ರತಿಜ್ಞೆ ಮಾಡಿ, ಅನುಸರಿಸಿ.